# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **131** |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ) |
| ಉತ್ತರಿಸುವ ದಿನಾಂಕ | : | **16.02.2022.** |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿಕ್ಕಲ್ಲಸಂದ್ರ ಗ್ರಾಮದ ಸ.ನಂ.76ರಲ್ಲಿರುವ ಕೆರೆಯ ಭೂ ಕಬಳಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಎಕರೆ ವಿಸ್ತೀರ್ಣದ ಭೂ ಕಬಳಿಕೆಯಾಗಿದೆ; | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಚಿಕ್ಕಲ್ಲಸಂದ್ರ ಗ್ರಾಮದ ಸ.ನಂ.76ರಲ್ಲಿ ಕಂದಾಯ ದಾಖಲೆಯಂತೆ ಸರ್ಕಾರಿ ಕೆರೆ ಜಮೀನಾಗಿದ್ದು ಒಟ್ಟು 12-26 ಎ/ಗು ವಿಸ್ತೀರ್ಣವಿರುತ್ತದೆ. ಪಹಣಿ ಕಲಂ 12(2)ರಲ್ಲಿ ಸರ್ಕಾರಿ ಕೆರೆ ಅಂಗಳವೆಂದು ನಮೂದಾಗಿದ್ದು ಹಾಲಿ ಕೆರೆ ಅಂಗಳವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು ಕೆರೆ ಅಸ್ತಿತ್ವ ಕಳೆದುಕೊಂಡಿರುತ್ತದೆ. ಸದರಿ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿದ್ದು ಮೋಜಿಣಿದಾರರ ತಾಂತ್ರಿಕ ನಕ್ಷೆಯಂತೆ ಈ ಕೆಳಕಂಡಂತೆ ಹಂಚಿಕೆಯಾಗಿರುತ್ತದೆ. |

| ಕ್ರ.ಸಂ. | ಒತ್ತುವರಿ ವಿವರ | ವಿಸ್ತೀರ್ಣ (ಎ/ಗು) |
|---|---|---|
| 1 | ಹಳ್ಳ ಹಾಗೂ ರಸ್ತೆ | 1-34 |
| 2 | ನರ್ಸರಿ | 0-33 |
| 3 | ಬಿ.ಎಂ.ಟಿ.ಸಿ. ಬಸ್ ನಿಲ್ದಾಣ | 0-06 |
| 4 | ಖಾಸಗಿ ಒತ್ತುವರಿ (ಖಾಸಗಿ ಕಟ್ಟಡ ಹಾಗೂ ಮನೆಗಳು ನಿರ್ಮಾಣವಾಗಿರುವುದು) | 4-27 |
| 5 | ಖುಲ್ಲಾ ಪ್ರದೇಶ | 5-06 |
| | ಒಟ್ಟು | 12-26 |

ಈ ಪೈಕಿ ಶ್ರೀ ಎಂ. ವೆಂಕಟಸ್ವಾಮಿ ಬಿನ್ ಲೇಟ್ ಮುನಿಯಪ್ಪ ಇವರು ಓ.ಎಸ್. ಸಂಖ್ಯೆ: 6338/2014ರಂತೆ 3-00 ಎಕರೆ ಜಮೀನಿಗೆ ಡಿಕ್ರಿ ಆದೇಶ ಪಡೆದಿದ್ದು, ಸಂಖ್ಯೆ: ಇ.ಎಕ್ಸ್. ನಂ-3268/2014, ದಿನಾಂಕ: 20.02.2020ರ ಆದೇಶದಲ್ಲಿ "The Execution petition filed by the decree holder is partly allowed" ಎಂದು ಆದೇಶಿಸಲಾಗಿರುತ್ತದೆ.

---2

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಭೂ ಕಬಳಿಕೆಯನ್ನು ತೆರವುಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಭೂ ಕಬಳಿಕೆದಾರರ ವಿರುದ್ಧ ಸರ್ಕಾರ ಮೊಕದ್ದಮೆ ದಾಖಲಿಸಿದೆಯೇ; ದಾಖಲಿಸದಿದ್ದಲ್ಲಿ ಕಾರಣಗಳೇನು? | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 54377/2014ರ ದಿನಾಂಕ: 16.02.2021ರ ಆದೇಶದಂತೆ ಅಳತೆ ಮಾಡಲಾಗಿದ್ದು, ಒತ್ತುವರಿದಾರರಿಗೆ ಆಕ್ಷೇಪಣೆ ಸಲ್ಲಿಸಲು ನಿಯಮಾನುಸಾರ ನೋಟಿಸ್ ನೀಡಲಾಗಿದ್ದು, ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ಭೂ ಕಬಳಿಕೆದಾರರ ವಿರುದ್ಧ ಮೊಕದ್ದಮೆ ದಾಖಲಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 06 ಎಲ್‌ಜಿಕ್ಯೂ 2022

**(ಆರ್.ಅಶೋಕ)**
ಕಂದಾಯ ಸಚಿವರು